ಅ) ಪರಿಶೀಲಸಲಾಗುವುದು.

ಬೆಂಗಳೂರು ನಗರದಲ್ಲಿ ೧೦-೦೦ ರೂ. ಗಳ ಸ್ಟಾಂಪ್ ಪೇಪರ್ ಸಿಗದೇ ಇರುವ ಬಗ್ಗೆ.

೧೩೧೧(೨೦೦೬)ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಈ) ಬೆಂಗಳೂರು ನಗರದಲ್ಲಿ ರೂ. ೧೦-೦೦ಗಳ ಸ್ಟಾಂಪ್ ಪೇಪರ್ ಸಿಗದೇ ಇರುವುದು ಸರ್ಕಾರಕ್ಕೆ ತಿಳಿದುಬಂದಿದೆಯಾ?

ಆ) ರೂ. ೧೦-೦೦ಗಳ ಸ್ಟಾಂಪ್ ಪೇಪರ್‌ನ್ನು ಕಾಳಸಂತೆಯಲ್ಲಿ (ಬ್ಲಾಕ್ ಮಾರ್ಕೆಟ್) ರೂ. ೧೪ ರಂತೆ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ರೂ. ೧೦-೦೦ಗಳ ಸ್ಟಾಂಪ್ ಪೇಪರ್‌ಗಳನ್ನು ಸ್ಟಾಂಪ್ ವೆಂಡಾರ್ಸ್‌ಗೆ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಇಲ್ಲಾ

ಆ) ಇಲ್ಲಾ

ಇ) ಕೊರತೆ ಇಲ್ಲಾ.

**ಚಿತ್ರದುರ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ ಕುರಿತು.**

೧೩೧೩(೧೮೩೪)ಶ್ರೀ ಎನ್. ಜಿ. ನಾಯ್ಕ್ (ಮೊಳಕಾಲ್ಮೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು?

ಆ) ಅವರು ಯಾವ ವರ್ಷದಿಂದ ಮಾಡುತ್ತಾ ಇದ್ದಾರೆ ಮತ್ತು ಆ ಭೂಮಿಯ ವಿಸ್ತೀರ್ಣವೆಷ್ಟು?

ಇ) ಈ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹಾಗೂ ಅವರ ಸಾಗುವಳಿ ಭೂಮಿಯ ವಿಸ್ತೀರ್ಣವೆಷ್ಟು (ಪೂರ್ಣ ವಿವರಗಳನ್ನು ನೀಡುವುದು).

ಈ) ಬಗರ್ ಹುಕುಂನಿಂದ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಮಾಡುವುದು ಸರ್ಕಾರದ ಗಮನದಲ್ಲಿದೆಯೇ? ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೬೦೮೭೮

ಆ) ಅವರಲ್ಲಿ ಬಹಳಷ್ಟು ಜನ ೧೯೮೬-೮೪ನೇ ಸಾಲಿನಿಂದ ಸಾಗುವಳಿ ಮಾಡುತ್ತಿದ್ದಾರೆ. ಬಗರ್‌ಹುಕುಂ ಸಾಗುವಳಿ ಮಾಡುತಿರುವ ಒಟ್ಟು ವಿಸ್ತೀರ್ಣ ೧೭೪೦೨೧ ಎಕರೆ ೩೧ ಗುಂಟೆಗಳು.